## ಕಲ್ಪನೆ



ಯಾರ ಆಣತಿಗೆ ಯಾರು ಹೆಜ್ಜೆ ಹಾಕುವರೋ, ನಡೆಯುತ್ತ ನಿರ್ಣಯಿಸುವುದು ಕಷ್ಟಕಷ್ಟ. ನೂರಾರು ಕೋಳಿಮರಿಗಳನ್ನು ಸುಲಲಿತವಾಗಿ ಕರೆದೊಯ್ಯುತ್ತಿದ್ದಾನೆ ಈ ನೇತಾರ. ಸಾಗುವ ದಾರಿ ಇನ್ನೆಷ್ಟು ದೂರವಿದೆ ಎಂಬ ಚಿಂತೆಯಿಲ್ಲದೆ, ದೂರು ತಕರಾರುಗಳಿಲ್ಲದೆ ಮರಿಗಳು ಸಾಗುತ್ತಿವೆ ನಿರುಮ್ಮಳವಾಗಿ. ಕರೆದೊಯ್ಯುವಾತನ ದಿಟ್ಟಿ ಮತ್ತೆಲ್ಲೋ ನೆಟ್ಟಿದೆ. ಹಾಗಿದ್ದರೆ ಈ ಸುಲಲಿತ ನಡೆಗೆ ನೇತಾರನ ಸಾಮರ್ಥ್ಯ ಕಾರಣವೇ... ಕೋಳಿಮರಿಗಳ ಶಿಸ್ತುಬದ್ಧತೆ ಕಾರಣವೇ... ಚಿತ್ರವನ್ನು ನೋಡಿದ ಕ್ಷಣ ನಿಮ್ಮ ಮನಸ್ಸಿನಲ್ಲಿ ಹಾದು ಹೋಗುವ ಭಾವಗಳನ್ನು ಸೆರೆಹಿಡಿಯಲು ಸಾಧ್ಯವಾದರೆ, ಕವನದ ಸಾಲುಗಳು ಹೊಳೆಯಬಹುದು. ಹಾಗಿದ್ದರೆ ನೀವು ಬರೆದ ಆ ಕವನವನ್ನು ನಮಗೆ ಕಳುಹಿಸಿಕೊಡಿ.
ನಿಮ್ಮ ಕಲ್ಪನೆಯ ಕವಿತೆ ನಮಗೆ ತಲುಪಲು ಕೊನೆಯ ದಿನ ಡಿಸೆಂಬರ್ 15.

ಚಿತ್ರ: ಫಕ್ರುದ್ದೀನ್ ಎಚ್

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in